ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಿಗೂ plan ಗಳನ್ನು ಹಾಕಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದ್ದರೆ ಬಹಳ ಹಣ ಬೇಕಾಗುತ್ತದೆ. ಆದ್ದರಿಂದ ಎಲ್ಲೆ ಅವಶ್ಯಕತೆಯಿದೆ ಯೆಂದು ಸ್ಥಳೀಯ ಅಧಿಕಾರಿಗಳ ಶಿಫಾರಸ್ಸು ಮಾಡಿ ಕಳುಹಿಸುತ್ತಾರೋ, ಅಂತಹ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ.

Kandikere-Bellara Road.

Q.—570. **Sri C. H. LINGADEVARU** (Chiknaikanahalli).—

Will the Government be pleased to state :—

(a) (i) when the Kandikere-Bellara Road of Chiknaikanahalli taluk was sanctioned ;

(ii) the amount of the estimate ;

(b) the amount spent ;

(c) the period required for completing the work ?

A.—**Sri T. CHANNIAH** (Minister for Public Health and Local Self-Government). –

(a) (i) In 1942-43.

(ii) Rs. 1 ,120.

(b) Rs. 19,737.

(c) One working season, if the funds of the District Board permit.

ಶ್ರೀ ಸಿ. ಎಚ್. ಲಿಂಗದೇವರು.—ಈ ರಸ್ತೆಯಲ್ಲಿ ಎಷ್ಟು ಮೈಲಿಗಳ ಕೆಲಸವಾಗಿದೆ ?

ಶ್ರೀ ಟಿ. ಚನ್ನಯ್ಯ.—ನಾಲ್ಕು ಮೈಲಿಗಳು ಮಾತ್ರ ಆಗಿವೆಯೆಂದು ತಿಳಿದುಬಂದಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಕೆಲಸ ನಿಂತು ಎಷ್ಟು ದಿವಸಗಳಾದುವು ?

ಶ್ರೀ ಟಿ. ಚನ್ನಯ್ಯ.—1942-43ನೇ ಸಾಲಿನಲ್ಲಿ ಈ ಕೆಲಸ ಮಂಜೂರಾಯಿತು. ಅದು ಒಟ್ಟು 8½ ಮೈಲಿ ಉದ್ದವಿದೆ. ಮೊದಲು estimate ಮಾಡುವಾಗ 18,120 ರೂಪಾಯಿಗಳಿಗೆ ಮಂಜೂರಾಗಿತ್ತು. ಈಗ 4 ಮೈಲಿ ರಸ್ತೆ ಮಾಡಿದ್ದಕ್ಕೆ 19,103 ರೂಪಾಯಿಗಳ ಬೇಕಾಗಿದೆಯೆಂದು Public Works ಇಲಾಖೆಯವರು ತಿಳಿಸಿದ್ದಾರೆ. ಪ್ರತಿ 8½ ಮೈಲಿ ರಸ್ತೆಯನ್ನು ಪೂರ್ತಿಯಾಗಿ ಮಾಡಬೇಕಾದರೆ 40 ಸಾವಿರ ರೂಪಾಯಿಗಳು ಬೇಕಾಗುತ್ತವೆ ಎಂಬುದಾಗಿ ತಿಳಿಸಿದಾರೆ. ಇದಕ್ಕೆ ಹಣಕಾಸನ್ನು ಯಾವ ರೀತಿ ಒದಗಿಸಬೇಕೆಂಬುದು ಸರ್ಕಾರದ ಪ್ರಸ್ತಾವನೆಯಲ್ಲಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಆಗಿರತಕ್ಕ 4 ಮೈಲಿ ರಸ್ತೆಯ ಗುರುತಾದರೂ ಇದೆಯೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಸಿ. ಎಸ್. ಲಿಂಗದೇವರು.—ಈ ಕೆಲಸ ಪೂರ್ತಿ ಆಗುವುದಕ್ಕೆ ಎಷ್ಟು ಮೈಲಿಗೆ ಅಂದಾಜಾಗಿದೆ ?

ಶ್ರೀ ಟಿ. ಚನ್ನಯ್ಯ.—ಒಟ್ಟು 8½ ಮೈಲಿಗಳಲ್ಲಿ 4 ಮೈಲಿ ರಸ್ತೆಯನ್ನು ಮಾಡಿದ್ದಾರೆ. ಆ 4 ಮೈಲಿ ರಸ್ತೆಗೆ 19 ಸಾವಿರ ಚಿಲ್ಲರೆ ರೂಪಾಯಿಗಳ estimate ಮಾಡಿದ್ದಾರೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆಲಸವನ್ನು ಮುಂದುವರಿಸದೆ ನಿಲ್ಲಿಸುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಇನ್ನೂ 40 ಸಾವಿರ ರೂಪಾಯಿ ಹಣವಿದ್ದರೆ ಉಳಿದ ರಸ್ತೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಹಣದ ಅಭಾವದಿಂದ ಕೆಲಸ ಮುಂದುವರಿಯದೆ ಹಾಗೆಯೇ ಇದೆ.

ಶ್ರೀ ಸಿ. ಎಚ್. ಲಿಂಗದೇವರು.—District Boardನಲ್ಲಿ ಹಣದ ಅಭಾವವಿದ್ದು ಕೆಲಸ ನಿಂತಿದ್ದರೆ State fundನಿಂದ ಈ ರಸ್ತೆಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈ ರಸ್ತೆ District Boardಗೆ ಸೇರಿದೆ. District Fundನಿಂದಲೇ ಈ ರಸ್ತೆಯ ಕೆಲಸವನ್ನು ಮಾಡಬೇಕಾಗಿದೆ. ಇದನ್ನು State Fund road ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—District Boardನಲ್ಲಿ ಸಾಕಷ್ಟು ಹಣವಿಲ್ಲದೆ ಈ ಕೆಲಸ ನಿಂತು ಹೋಗಿ 10-12 ವರ್ಷಗಳಾಗಿವೆ. ಅದು ಮುಖ್ಯವಾದ ರಸ್ತೆಯಾಗಿರುವುದರಿಂದ State Fund ರೋಡಿನೊಳಗೆ ಇದನ್ನು ಸೇರಿಸಲು ಪ್ರಯತ್ನಪಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—1935ನೇ ಇಸವಿಯಲ್ಲಿ ರೋಡು re-classification ಮಾಡಿದಾಗ ಈ ರಸ್ತೆ, District Boar ಗೆ ಸೇರಬೇಕೆಯೆಂದು ತೀರ್ಮಾನವಾಗಿದೆ. ಈಗ ಅದನ್ನು State Fund Roadಗೆ ಸೇರಿಸಬೇಕಾದರೆ ಅದನ್ನು ಯೋಚನೆ ಮಾಡಬೇಕು. ಹಿಂದೆ ತೀರ್ಮಾನವಾದುದನ್ನು ಮತ್ತೆ ಬದಲಾಯಿಸುವುದಕ್ಕೆ ಕಷ್ಟವಾಗುತ್ತದೆ ಅವಶ್ಯಕತೆ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಸಿ ಎಚ್. ಲಿಂಗದೇವರು.—ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬರೆದು ತಿಳಿದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—18,000 ರೂಪಾಯಿಗಳಿಗೆ ಅಂದಾಜಾಗಿದೆಯೆಂದು ಹೇಳಿದ್ದೀರಿ ; ಈಗ 19,032 ರೂಪಾಯಿಗಳು ಖರ್ಚಾಗಿಯೂ complete ಆಗದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು 40,000 ರೂಪಾಯಿಗಳನ್ನು ಒದಗಿಸಿದರೆ 8½ ಮೈಲಿ ರಸ್ತೆಯನ್ನು ಪೂರೈಸಬಹುದು. ದುಡ್ಡಿಲ್ಲದಿರುವುದರಿಂದ ಇದನ್ನು ಪೂರೈಸುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸಹಾಯದ್ರವ್ಯ ಏನಾದರೂ ಕೊಟ್ಟು ಸಹಾಯ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—40,000 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಕೆಲಸ ನಿಂತುಹೋಗಿದೆ. ಆದ್ದರಿಂದ ಮುಂದೆ ಸ್ವಲ್ಪ ಸ್ವಲ್ಪ ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನಮಾಡೋಣ.

Hosa Palya-Tiptur Road.

Q.—766. **Sri T. G. THIMMEGOWDA** (Tiptur).—

Will the Government be pleased to state :—

(a) whether it is a fact that a road connecting Hosa Palya and Tiptur has